ಈ ರೋಗವು ಮೊಟ್ಟೆಯಿಂದ ನೇರವಾಗಿ ಬರದಿದ್ದಲ್ಲಿ ರೇಷ್ಮೆ ಹುಳಗಳು 2 ಮತ್ತು 3ನೇ ಜ್ವರಕ್ಕೆ ಕ್ರಮಬದ್ಧವಾಗಿ ಕೂರದೇ ಇರುವ ಲಕ್ಷಣಗಳಿರುತ್ತದೆ.

ಕೆಲವು ಬೆಳೆಗಳಲ್ಲಿ ರೇಷ್ಮೆ ಹುಳುವು 2ನೇ ಜ್ವರಕ್ಕೆ ಕ್ರಮಬದ್ಧವಾಗಿ ಕೂರದೇ ಇರುವುದು ಗಮನಕ್ಕೆ ಬಂದಿದೆ. ಈ ಕಾರಣಗಳಿಂದ ಇಲಾಖೆಯ ತಾಂತ್ರಿಕ ಸಿಬ್ಬಂದಿ ವರ್ಗದವರಿಗೆ, ಖಾಸಗಿ ಮೊಟ್ಟೆ ತಯಾರಕರು ಪ್ರತಿಯೊಂದು ಲಾಟನ್ನು ಕ್ರಮವಾಗಿ ಪರೀಕ್ಷಿಸಬೇಕೆಂದು, ಪ್ಯೂಪ ಮತ್ತು ಚಿಟ್ಟೆಗಳನ್ನು ಪರೀಕ್ಷಿಸಿ ರೋಗರಹಿತ ಮೊಟ್ಟೆಗಳು ಮಾತ್ರವೇ ಸರಬರಾಜು ಆಗುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಅಧ್ಯಕ್ಷರು : ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಧರ್ಮಸಿಂಗ್ : (ಗೃಹ ಮತ್ತು ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ.

ಅ) 1951ನೇ ಸಾಲಿನ ರಾಜ್ಯ ಹಣಕಾಸು ನಿಗಮದ ಅಧಿನಿಯಮದ 38(3)ನೇ ಕಲಮಿನ ಮೇರೆಗೆ 1990-91ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ನಿಗಮದ 22ನೇ ವಾರ್ಷಿಕ ವರದಿ ಹಾಗೂ

ಆ) 1951ನೇ ಸಾಲಿನ ರಾಜ್ಯ ಹಣಕಾಸು ನಿಗಮದ ಅಧಿನಿಯಮ 37(7)ನೇ ಕಲಮಿನ ಮೇರೆಗೆ

31ನೇ ಮಾರ್ಚ್ 1990ನೇ ಸಾಲಿಗೆ ಅಂತ್ಯಗೊಂಡಂತೆ ಇರುವ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಲೆಕ್ಕದ ಮೇಲಿನ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಧರ್ಮಸಿಂಗ್ : (ಗೃಹ ಮತ್ತು ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿ)ಯವರ ಪರವಾಗಿ,

1983ನೇ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್ ಸಮಿತಿ, ಮಂಡಲ ಪಂಚಾಯತ್ ಹಾಗೂ ನ್ಯಾಯ ಪಂಚಾಯತ್ ಅಧಿನಿಯಮದ 309(3)ನೇ ಕಲಮಿನ ಮೇರೆಗೆ.

ಕೆಳಕಂಡ ಜಿಲ್ಲಾಪರಿಷತ್ತುಗಳಿಗೆ ಸಂಬಂಧಿಸಿದಂತೆ ಸರ್ಕಾರದವರು ಕ್ರಮ ಕೈಗೊಂಡಿರುವ ವಿವರಣೆಯೊಂದಿಗೆ 1988-89ನೇ ಸಾಲಿನ ವಾರ್ಷಿಕ ಆಡಳಿತ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅ) ಬೆಳಗಾಂ

ಆ) ಧಾರವಾಡ

ಇ) ಬಿಜಾಪುರ

ಹಾಗೂ ಈ) ಉತ್ತರ ಕನ್ನಡ

4. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1957ನೇ ಇಸವಿ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯ 9ನೇ ಕಲಮಿನ ಉಪಕಲಮು 2(ಎ) ಮೇರೆಗೆ ಮಾನ್ವಿ, ಸಿಂಧನೂರು, ಲಿಂಗಸಗೂರು ಹಾಗೂ ರಾಯಚೂರು ತಾಲ್ಲೂಕುಗಳಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ಪರವಾಗಿ ಭೂಮಿಯನ್ನು ಖರೀದಿಸುವಾಗ ಹಾಗೂ ಭೋಗ್ಯ ಮಾಡುವಾಗ ತಗಲುವ ಶುಲ್ಕವನ್ನು ಮಾಫಿ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ 2ನೇ ಆಗಸ್ಟ್ 1991 ರಂದು ಹೊರಡಿಸಿದ ಆದೇಶ ಸಂಖ್ಯೆ ಆರ್ ಡಿ 47 ಇಎಸ್ಆರ್ 91ನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ

5. (ಪಶುಸಂಗೋಪನೆ ರಾಜ್ಯ ಮಂತ್ರಿ)ಯವರ ಪರವಾಗಿ 1956ನೇ ಸಾಲಿನ ಕಂಪನಿಗಳ ಅಧಿನಿಯಮದ 619 (ಎ) ಕಲಮಿನ ಮೇರೆಗೆ 1988-89ನೇ ಸಾಲಿನ ಕರ್ನಾಟಕ ಹೈನು ಅಭಿವೃದ್ಧಿ ಮಂಡಳಿ ನಿಯಮಿತದ 15ನೇ ವಾರ್ಷಿಕ ವರದಿ ಹಾಗೂ 1989-90ನೇ ಸಾಲಿನ ಕರ್ನಾಟಕ ಹೈನು ಅಭಿವೃದ್ಧಿ ಮಂಡಳಿ ನಿಯಮಿತದ 16ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ವರದಿಯನ್ನೊಪ್ಪಿಸುವುದು

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಉಪಾಧ್ಯಕ್ಷರು) : ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ನಾಲ್ಕನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಬಾಬುಗೌಡ ರುದ್ರಗೌಡ ಪಾಟೀಲ್ : ಸಭೆಯು ವರದಿಯನ್ನು ಒಪ್ಪಬಹುದೆಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ರಾಜ್ಯದಲ್ಲಿ ರೇಷ್ಮೆ ಹುಳುಗಳಿಗೆ ಗಂಟುರೋಗ ತಗಲಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ರೇಷ್ಮೆ ಹುಳುಗಳಿಗೆ ಬಂದಿರತಕ್ಕಂಥ ಗಂಟು ರೋಗದ ಬಗ್ಗೆ ನಾವು ಈಗ ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೇವೆ. ಇಡೀ ರಾಜ್ಯದಲ್ಲಿ ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಎಸ್.ಎಸ್.ಎಲ್.ಸಿ ಬೋರ್ಡ್‌ನವರು ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕವನ್ನು ಡಬಲ್ ಮಾಡಿರುವುದರಿಂದ ವಿದ್ಯಾರ್ಥಿ ಸಮುದಾಯಕ್ಕೆ ತುಂಬಾ ಅನ್ಯಾಯವನ್ನು ಮಾಡಿದ ಹಾಗೆ ಆಗಿದೆ..

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ತಾವು ಅದನ್ನು ಪರಿವರ್ತನೆ ಮಾಡಿ, ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೀರಿ, ಅದಕ್ಕಾಗಿ ಸಂತೋಷ. ಆದರೆ ವಿಷಯ ಏನಾಗಿದೆ ಅಂದರೆ, ಇದು ಸುಮಾರು 30 ಲಕ್ಷ ಜನ ಈ ಒಂದು ವ್ಯವಹಾರದ ಆಶಯದಲ್ಲಿ